# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

## ಸಿ.ಸಿ. ನಂ. 1216/20

ಸಿ.ಡಬ್ಲ್ಯು 1
ಪಿ.ಡಬ್ಲ್ಯು 3

| | | |
|---|---|---|
| ಸಾಕ್ಷಿದಾರರ ಹೆಸರು | – | ಬಬ್ಬು ಪಟಗಾರ |
| ತಂದೆಯ ಹೆಸರು | – | ಹನುಮಂತ ಪಟಗಾರ |
| ವಯಸ್ಸು | – | 47 ವರ್ಷ |
| ಉದ್ಯೋಗ | – | ಮುಖ್ಯಪೇದೆ, ಮಂಕಿ ಪೊಲೀಸ್ ಠಾಣೆ |
| ವಾಸ್ತವ್ಯ | – | ಮಂಕಿ, ತಾಲೂಕ ಹೊನ್ನಾವರ |

(ಇಂದು ದಿನಾಂಕ 02-08-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ –ಮಾನ್ಯ ಸ.ಸ.ಅ. ರವರಿಂದ**

ನಾನು 2014 ರಿಂದ 2021 ರ ವರೆಗೆ ಹೊನ್ನಾವರ ಪೊಲೀಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯನಿರ್ವಹಿಸಿರುತ್ತೇನೆ.

ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರು ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ದಿನಾಂಕ 06-06-2020 ರಂದು ಆರೋಪಿಯನ್ನು ಹೊನ್ನಾವರ ಪೊಲೀಸ್ ಠಾಣೆಯ ಗುನ್ನಾ ಸಂಖ್ಯೆ 117/20 ರಲ್ಲಿ ಮಾನ್ಯ ವಿಶೇಷ ನ್ಯಾಯಾಲಯ, ಕಾರವಾರ ಇಲ್ಲಿಗೆ ಹಾಜರುಪಡಿಸಲು ನನ್ನೊಂದಿಗೆ ಚಾ.ಸಾ. 4 ಮತ್ತು 5 ರವರನ್ನು ಬೆಂಗಾವಲಿಗಾಗಿ ನೇಮಿಸಿದ್ದು, ನಾವು ವೃತ್ತ ನಿರೀಕ್ಷಕರ ಆದೇಶದಂತೆ ಸದರಿ ಪ್ರಕರಣದ ಆರೋಪಿಯಾದ ಪ್ರಸ್ತುತ ಪ್ರಕರಣದ ಆರೋಪಿಯನ್ನು ಖಾಸಗಿ ಓಮಿನಿ ವಾಹನ ಸಂಖ್ಯೆ ಕೆಎ-47-3377 ರಲ್ಲಿ ಕಾರವಾರಕ್ಕೆ ಹಾಜರುಪಡಿಸಲು ರಾತ್ರಿ 9.00 ಗಂಟೆ ಸುಮಾರಿಗೆ ಹೊನ್ನಾವರದಿಂದ ಹೊರಟೆವು. ರಾತ್ರಿ 9.30 ಗಂಟೆಗೆ ನಾವು ಕುಮಟಾಕ್ಕೆ ತಲುಪಿದ್ದು ಆ ಸಂದರ್ಭದಲ್ಲಿ ಆರೋಪಿಯು ಮೂತ್ರ ವಿಸರ್ಜನೆ

ಮಾಡಬೇಕೆಂದು ನಮ್ಮಲ್ಲಿ ತಿಳಿಸಿದ್ದು, ಆಗ ನಾವು ಕುಮಟಾದ ಹೊಸ ಬಸ್ ನಿಲ್ದಾಣದ ಬಳಿ ನಮ್ಮ ವಾಹನವನ್ನು ನಿಲ್ಲಿಸಿ ಆತನನ್ನು ನಾನು ಮತ್ತು ಚಾ.ಸಾ.4 ರವರು ಹೊಸ ಬಸ್ ನಿಲ್ದಾಣದ ಶೌಚಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಆರೋಪಿಯು ನಮ್ಮನ್ನು ದೂಡಿ ಹಾಕಿ ಓಡಿ ಹೋಗಿರುತ್ತಾನೆ. ನಾನು ಮತ್ತು ಚಾ.ಸಾ. 4 ರವರು ಆತನನ್ನು ಹಿಡಿಯಲು ಬೆನ್ನಟ್ಟಿ ಹೋದೆವು. ಆದರೆ ಆತ ತಪ್ಪಿಸಿಕೊಂಡು ಕೃಷಿ ಇಲಾಖೆಯ ಗೇಟ್ ಮೂಲಕ ಓಡಿ ಹೋಗಿರುತ್ತಾನೆ. ನಾವು ಅಕ್ಕಪಕ್ಕದ ಸ್ಥಳಗಳಲ್ಲಿ ಆರೋಪಿಗಾಗಿ ಹುಡುಕಾಡಿದ್ದು, ಆತ ನಮಗೆ ಸಿಕ್ಕಿರುವುದಿಲ್ಲ. ನಂತರ ಸದರಿ ವಿಚಾರವನ್ನು ನಮ್ಮ ಮೇಲಾಧಿಕಾರಿಗಳಿಗೆ ದೂರವಾಣಿ ಮೂಲಕ ತಿಳಿಸಿದ್ದು, ನಂತರ ನಾನು ಕುಮಟಾ ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ದೂರನ್ನು ನಿ.ಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸನವರು ಮರುದಿನ ಸ್ಥಳದಲ್ಲಿ ಪಂಚನಾಮೆಯ ಸಲುವಾಗಿ ಬಂದಿದ್ದು ನಾನು ಪೊಲೀಸನವರಿಗೆ ಆರೋಪಿಯು ಓಡಿಹೊದಂತಹ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯು ಸಂದರ್ಭದಲ್ಲಿ ಪೊಲೀಸನವರು ಪೋಟೊ ತೆಗೆದಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಪೋಟೊವನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಘಟನೆಯ ದಿನ ನಮ್ಮನ್ನು ತಳ್ಳಿ ಓಡಿ ಹೋದಂತಹ ಆರೋಪಿ ಆಗಿರುತ್ತಾನೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ರೂ. 300-00 ಖರ್ಚನ್ನು ನೀಡುವ ಷರತ್ತಿಗೆ ಒಳಪಟ್ಟು ಸಮಯ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾದಂ. ಕುಮಟಾ